ಕನ್‌ವರ್ಶನಿಗೆ ಅನುಕೂಲವಾಗಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಳಿ ಭೂಮಾಪನ ಮಾಡಲು ಒತ್ತಾಯ

೯೫. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ದಶಕಗಳ ಹಿಂದೆ ಆದ ಭೂಮಾಪನದಲ್ಲಿ ಎಲ್ಲಾ ಭೂಮಿಯೂ ಕೃಷಿ ಭೂಮಿ ಎಂದು ಪರಿಗಣಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರಾಜ್ಯದ ಇತರ ಜಿಲ್ಲೆಗಳಲ್ಲಿಲ್ಲದ ಈ ಕ್ರಮದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕರಿಗೆ ಕನ್ವರ್‌ಶನ್ ಇತ್ಯಾದಿಗಳಿಗಾಗಿ ಅನವಶ್ಯಕ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಮರಳಿ ಭೂಮಾಪನ ಮಾಡಿಸಿ ಯಾವುದು ನಿಜವಾದ ಕೃಷಿ ಭೂಮಿಯೋ ಅದನ್ನು ಮಾತ್ರ ಕೃಷಿ ಭೂಮಿ ಎಂದು ಪರಿಗಣಿಸಲಾಗುವುದೇ ಹಾಗೂ ಸರಕಾರದ ಯೋಜನೆ ಏನು ?

ಶ್ರೀ ಆಜೀಜ್ ಸೇಠ್ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯಿದೆ ೧೯೬೪ರ ಕಲಂ ೯೫ರಡಿಯಲ್ಲಿ ದಿನಾಂಕ ೨–೧೦–೮೦ ಕ್ಕಿಂತ ಹಿಂದೆ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಉಪಯೋಗಿಸಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಭೂ ಪರಿವರ್ತನೆಯಾಗಿದೆ ಎಂದು ಪರಿಗಣಿಸಬಹುದಾಗಿದೆ. ಇದಲ್ಲದೆ ಈ ಅಧಿನಿಯಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಭೂಮಿಯನ್ನು (ಪುಂಜ) ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರರ ಗಮನಕ್ಕೆ ತಂದು ಯಾವುದೇ ಜಮೀನು ಅಥವಾ ಭಾಗಶಃ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಉಪಯೋಗಿಸಬಹುದಾಗಿದೆ. ಆದುದರಿಂದ ಈ ಜಿಲ್ಲೆಯಲ್ಲಿನ ಸಾರ್ವಜನಿಕ ಯಾವುದೇ ತೊಂದರೆಯು ಆಗುತ್ತಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೈಂದೂರಿನಲ್ಲಿ ಕೆ.ಇ.ಬಿ. ಉಪ ವಿಭಾಗ ಸ್ಥಾಪಿಸುವುದು

೯೬. ಶ್ರೀ ಜಿ.ಎಸ್. ಆಚಾರ್ (ಬೈಂದೂರು) —ಮಾನ್ಯ ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ ಡ ಜಿಲ್ಲೆಯ ಕುಂದಾಪುರದಲ್ಲಿರುವ ಕೆ.ಇ.ಬಿ ಸಬ್‌ಡಿವಿಜನ್ ಕಾರ್ಯವ್ಯಾಪ್ತಿ ಹಾಗೂ ಕೆಲಸದ ಒತ್ತಡ ವಿಪರೀತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬೈಂದೂರಿನಲ್ಲಿ ಇನ್ನೊಂದು ಕೆ.ಇ.ಬಿ.ಯ ಸಬ್‌ಡಿವಿಜನ್ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಸಚಿವರು).—

ಅ) ಕುಂದಾಪುರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪವಿಭಾಗದ ಕಾರ್ಯವ್ಯಾಪ್ತಿ ಹಾಗೂ ಕೆಲಸದ ಒತ್ತಡ ಹೆಚ್ಚಿರುವುದು ಮಂಡಳಿಯ ಗಮನಕ್ಕೆ ಬಂದಿದೆ. ಇದನ್ನು ಸರಿದೂಗಿಸಲು ಸದರೀ ಕುಂದಾಪುರ ಉಪವಿಭಾಗವನ್ನು ವಿಭಜಿಸಿ ಕುಂದಾಪುರ (ನಗರ) ಮತ್ತು ಕುಂದಾಪುರ (ಗ್ರಾಮಾಂತರ) ವೆಂಬ ''ಎರಡು'' ಉಪವಿಭಾಗಗಳನ್ನು ರಚಿಸುವ ಪ್ರಸ್ತಾವನೆ ಮಂಡಳಿಯ ಪರಿಶೀಲನೆಯಲ್ಲಿದೆ.

ಆ) ಬೈಂದೂರಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಪವಿಭಾಗವನ್ನು ಸ್ಥಾಪಿಸುವ ಪ್ರಸ್ತಾವನೆ ಇಲ್ಲ.